## ಎಣಿಕೆ

ಗುಂಡ ಮಾನಸಿಕ ಆಸ್ಪತ್ರೆಯೊಂದರ ಸನಿಹದಲ್ಲಿ ನಡೆದುಕೊಂಡು ಹೋಗುತ್ತಿದ್ದ. ಅಲ್ಲಿನ ಮಾನಸಿಕ ರೋಗಿಗಳು '13... 13... 13... 13...' ಎಂದು ಜೋರಾಗಿ ಕೂಗುವುದು ಕೇಳಿಸಿತು. ಆಸ್ಪತ್ರೆಯ ಆವರಣದ ಗೋಡೆಯು ಎತ್ತರವಿದ್ದುದರಿಂದ ಒಳಗೆ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗಲಿಲ್ಲ. ಕುತೂಹಲ ತಾಳಲಾರದೆ ಗುಂಡ ಗೋಡೆಯಲ್ಲಿದ್ದ ಸಣ್ಣ ರಂಧ್ರದ ಮೂಲಕ ಇಣುಕಿ ನೋಡಿದ. ಆಗ ಒಳಗಿಂದ ಒಬ್ಬಾತ ಇವನ ಕಣ್ಣಿಗೆ ಕೋಲಿನಿಂದ ಇರಿದು ಬಿಟ್ಟ. ತಕ್ಷಣ ಒಳಗಿನಿಂದ '14... 14... 14... 14...' ಎಂದು ಕೂಗುವುದು ಕೇಳಿಸಿತು!

**ರಮಣ್ ಶೆಟ್ಟಿ ರೆಂಜಾಳ್**



## ಮುಂದೆ ಹೇಳಬೇಡ

ಸಂಜೆ ಕಾಫಿ ಕುಡಿಯುವಾಗ ಪತಿ ಪರಮೇಶಿಯೊಂದಿಗೆ ಅದು, ಇದು ಮಾತಾಡುತ್ತ ಪಮ್ಮಿ ಅಂದಳು, 'ಈ ಪಕ್ಕದ ಮನೆ ಪಂಕಜಳಿಗೆ ಏನು ಜಂಬಾ ಗೊತ್ತಾ, ಎಲ್ಲದರಲ್ಲೂ ತಾನೇ ಗ್ರೇಟ್ ಅನ್ನೊಥರ ಆಡ್ತಿರ್ತಾಳೆ' ಎಂದು. ಪರಮೇಶಿ ತಾನಾಯ್ತು ಪಕೋಡ ಆಯ್ತು ಅಂತ ಸುಮ್ಮನಿದ್ದ. ಆದರೆ ಮಗ ಗೋಪಿ, 'ಹೌದಾ ಅಮ್ಮ?' ಎಂದು ಪ್ರತಿಕ್ರಿಯಿಸಿದ. 'ಏ... ಗೋಪಿ, ಆಂಟಿ ಬಂದಾಗ ಅವರ ಮುಂದೆ ಇದೆಲ್ಲ ಮಾತಾಡಿದ್ರೆ ಏಟು ಬೀಳುತ್ತೆ' ಎಂದು ತಾಕೀತು ಮಾಡಿದಳು. ಪಂಕಜ ಮರುದಿನ ಮಧ್ಯಾಹ್ನ ಪಮ್ಮಿ ಮನೆಗೆ ಬಂದಳು. ಆಗ ಗೋಪಿ, 'ಆಂಟೀ, ನಿಮಗೆ ತುಂಬಾ ಜಂಬಾ ಅಲ್ವಾ?' ಎಂದಾಗ ಪಮ್ಮಿ ಕಸಿವಿಸಿಗೊಂಡಳು. ಪಂಕಜ ಹೊರಟು ಹೋದ ಬಳಿಕ, ಗೋಪಿಯ ಮುಂಗೈ ಹಿಡಿದು, 'ಏಯ್... ಕತ್ತೆ ನಾನು ಏನು ಹೇಳಿದ್ದೆ ನಿಂಗೆ?' ಎಂದು ಗದರಿಸಿದಳು. ಗೋಪಿ, 'ಆಂಟಿ ಮುಂದೆ ಇದೆಲ್ಲ ಮಾತಾಡಬೇಡ ಅಂದಿದ್ದೆ. ಆದ್ರೆ ನಾನು ಅವರ ಹಿಂದೆ ನಿಂತು ಹೇಳಿದ್ದು ಅಲ್ವಾ?' ಎಂದಾಗ ತಲೆ ಚಚ್ಚಿಕೊಂಡಳು.

**ಅರವಿಂದ ಜಿ. ಜೋಷಿ**

